ದಿನಾಂಕಃ18-02-2017 ರಂದು ಸಾಕ್ಷಿದಾರರನ್ನು ಕರೆಯಿಸಿ ಪ್ರಮಾಣೀಕರಿಸಲಾಯಿತು.

ಪಾಟೀ ಸವಾಲುಃ ವಾದಿಗಳ ಪರ ಶ್ರೀ ಎಂಬಿಸಿ ವಕೀಲರಿಂದಃ

1. ನಾನು ಪಿಯುಸಿ ವರೆಗೂ ವಿದ್ಯಾಭ್ಯಾಸ ಮಾಡಿದ್ದೇನೆ. ನನಗೆ ಅನುಕಂಪದ ಆಧಾರದ ಮೇಲೆ 2005 ರಲ್ಲಿ ಕೆಲಸ ಸಿಕ್ಕಿರುತ್ತದೆ. ನಾನು ಈಗ ಉಡುಪಿ ಜಿಲ್ಲೆಯ ಬ್ರಹ್ಮಾವರದ ಕಂದಾಯ ಇಲಾಖೆಯಲ್ಲಿ ಉಪತಹಶೀಲ್ದಾರಾಗಿ ಕೆಲಸ ಮಾಡುತ್ತಿದ್ದೇನೆ. ದಾವಾ ಜಮೀನುಗಳ ಸರ್ವೆ ದಾಖಲಾತಿಗಳ ಬಗ್ಗೆ ನನಗೆ ಮಾಹಿತಿ ಇರುತ್ತದೆ. ಶಿವಪ್ಪ ಮತ್ತು ನಿಂಗಮ್ಮ ನನ್ನ ಅಜ್ಜ-ಅಜ್ಜಿ ಎಂದರೆ ಸರಿ. ನನ್ನ ತಂದೆಗೆ ನಾಗಪ್ಪ , ಸುಂದ್ರಮ್ಮ, ಬಸಪ್ಪ , ಗೌರಮ್ಮ , ದೊಡ್ಡಭರಮಪ್ಪ , ಸಣ್ಣಭರಮಪ್ಪ ಸಹೋದರ- ಸಹೋದರಿಯರು ಎಂದರೆ ಸರಿ. ನನ್ನ ದೊಡ್ಡಪ್ಪ ನಾಗಪ್ಪನವರಿಗೆ 1ನೇ ಪ್ರತಿವಾದಿ ಹೆಂಡತಿ ಮತ್ತು 2 ರಿಂದ 5ನೇ ಪ್ರತಿವಾಗಳು ಮಕ್ಕಳು ಎಂದರೆ ಸರಿ. ನನ್ನ ತಂದೆ 2002ನೇ ಸಾಲೀನಲ್ಲಿ ಮೃತಪಟ್ಟಿದ್ದಾರೆ. 8ನೇ ಪ್ರತಿವಾದಿ ನನ್ನ ತಾಯಿ , 10ನೇ ಪ್ರತಿವಾದಿ ನನ್ನ ಸಹೋದರಿ ಎಂದರೆ ಸರಿ. ನನ್ನ ಅಜ್ಜ ಶಿವಪ್ಪನವರ ತಂದೆ ದೊಡ್ಡಭರಮಪ್ಪ ಹಾಗೂ ತಾಯಿ ಕರಿಯವ್ವ ಎಂದರೆ ಸರಿ. ನನ್ನ ಅಜ್ಜ ಶಿವಪ್ಪನವರಿಗೆ ಕನ್ನಪ್ಪ ಎಂಬ ಸಹೋದರ ಇದ್ದರು ಎಂದರೆ ಸರಿ. ಕನ್ನಪ್ಪನವರ ಹೆಂಡತಿ ನಾಗಮ್ಮ ಎಂದರೆ ಸರಿ. ವಾದಿ 1 ರಿಂದ 3 ಸದರಿ ಕನ್ನಪ್ಪ ಮತ್ತು ನಾಗಮ್ಮನವರ ಮಕ್ಕಳು ಎಂದರೆ ನನಗೆ ಗೊತ್ತಿಲ್ಲ. 4 ಮತ್ತು 5 ನೇ ವಾದಿಗಳು 1ನೇ ವಾದಿಯ ಅಕ್ಕ ಸಿದ್ದಮ್ಮನ ಮಕ್ಕಳು ಎಂದರೆ ನನಗೆ ಗೊತ್ತಿಲ್ಲ. ಪ್ರತಿವಾದ ಪತ್ರದೊಂದಿಗೆ ಮೂಲ ಪುರುಷ ದೊಡ್ಡಭರಮಪ್ಪನ ಕುಟುಂಬ ವಂಶ-ವೃಕ್ಷ ಹಾಜರುಪಡಿಸಿದ್ದಿರಾ ಎಂದರೆ ಶಿವಪ್ಪನವರ ಕುಟುಂಬ ವಂಶ-ವೃಕ್ಷ ಮಾತ್ರ ಹಾಜರುಪಡಿಸಿದ್ದೇನೆ. ಈ ರೀತಿ ಯಾವುದೇ ವಂಶ-ವೃಕ್ಷ ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ.

2. ಪ್ರತಿವಾದಿ ಸಾಕ್ಷಿ 1 ಯಾವ ರೀತಿಯಲ್ಲಿ ಸಾಕ್ಷಿ ನುಡಿದಿರುತ್ತಾರೆ ಎಂದು ತಿಳಿದುಕೊಂಡಿದ್ದೇನೆ. ದಾವೆಯಲ್ಲಿ ಕೈಬಿಟ್ಟಿರುವ ಅಗತ್ಯ ಪಕ್ಷಗಾರರು ಮತ್ತು ಆಸ್ತಿಗಳ ವಿವರಣೆಯನ್ನು ಪ್ರತಿವಾದಿ ಪತ್ರದಲ್ಲಿ

ಮತ್ತು ಪ್ರಮಾಣ ಪತ್ರದಲ್ಲಿ ತಿಳಿಸಿಲ್ಲ ಎಂದರೆ ಸರಿ. ದಾವಾ ಆಸ್ತಿಗಳು ನಮ್ಮ ಕುಟುಂಬದ ಪೀರ್ತಾಜಿತ ಆಸ್ತಿಗಳು ನನ್ನ ತಾತಾ ಶಿವಪ್ಪ ಗಳಿಸಿದ ಸ್ವಯಾರ್ಜಿತ ಆಸ್ತಿಗಳು ಎನ್ನುತ್ತಾರೆ. ನನ್ನ ತಾತಾ ಶಿವಪ್ಪ ಯಾವಾಗ , ಯಾರಿಂದ , ಎಷ್ಟು ಹಣಕ್ಕೆ ಆಸ್ತಿಗಳನ್ನು ಖರೀದಿಸಿದ್ದಾರೆ ಎಂದು ಹೇಳಲಾಗುತ್ತದೆಯೇ ಎಂದರೆ ದಾಖಲೆಗಳನ್ನು ಹಾಜರುಪಡಿಸಿದ್ದೇನೆ ಎನ್ನುತ್ತಾರೆ. ನನ್ನ ಅಜ್ಜ ಶಿವಪ್ಪ ಸ್ವಯಾರ್ಜಿತವಾಗಿ ದಾವಾ ಆಸ್ತಿಗಳನ್ನು ಗಳಿಸಿದ ಬಗ್ಗೆ ಯಾವುದೇ ದಾಖಲೆಗಳನ್ನು ಸಲ್ಲಿಸಿಲ್ಲ ಎಂದರೆ ಸರಿಯಲ್ಲ.

3. ನನ್ನ ಅಜ್ಜ ಶಿವಪ್ಪ ಹಾಗೂ ಅವರ ಸಹೋದರ ಕನ್ನಪ್ಪ ನೊಂದಾಯಿತ ವಿಭಾಗ ಪತ್ರ ಅಥವಾ ನ್ಯಾಯಾಲಯದ ಡಿಕ್ರಿಯ ಮೂಲಕ ವಿಭಾಗ ಏನಾದರೂ ಮಾಡಿಕೊಂಡಿದ್ದಾರೆಯೇ ಎಂದರೆ ಎಲ್ಲ ಆಸ್ತಿಗಳನ್ನು ನನ್ನ ಅಜ್ಜ ಶಿವಪ್ಪ ಗಳಿಸಿರುವ ಕಾರಣ ಅಂತಹ ಸಂದರ್ಭ ಉಂಟಾಗುವುದಿಲ್ಲ ಎನ್ನುತ್ತಾರೆ. ನನ್ನ ಅಜ್ಜ ಶಿವಪ್ಪ ಮತ್ತು ಅವರ ಗಂಡು ಮಕ್ಕಳು ಹಿಸ್ಸೆ ಮಾಡಿಕೊಂಡಿರುವ ಬಗ್ಗೆ ನೊಂದಾಯಿತ ವಿಭಾಗ ಪತ್ರದ ದಾಖಲೆ ಇದೆಯೇ ಎಂದರೆ ಅವರ ಎಲ್ಲರೂ ಆಪ್ತಾತ ವಾಟಣಿ ಮಾಡಿಕೊಂಡಿದ್ದಾರೆ ಎನ್ನುತ್ತಾರೆ. ಮ್ಯೂಟೇಷನ್ ಸಂಖ್ಯೆ 1040 ಮತ್ತು 1155 ವಿರುದ್ಧ ಮಾನ್ಯ ಉಪವಿಭಾಗಾಧಿಕಾರಿಗಳ ನ್ಯಾಯಾಲಯದಲ್ಲಿ ಕಂದಾಯ ಮೇಲ್ಮನವಿ ಸಲ್ಲಿಸಲಾಗಿದೆ ಎಂದರೆ ಸರಿ. ಸದರಿ ಮೇಲ್ಮನವಿ ದಿಃ08/08/2016 ರಂದು ಪುರಸ್ಕೃತವಾಗಿದೆ ಎಂದರೆ ಈ ವಿಷಯ ನನಗೆ ತಿಳಿದಿಲ್ಲ ಎನ್ನುತ್ತಾರೆ. ಪಂಚಾಯಿತಿ ಆಸ್ತಿಗಳು ವಿಭಾಗ ಆಗಿದೆಯೇ ಎಂದರೆ ಈ ಆಸ್ತಿಗಳು ವಿಭಾಗವಾಗಿಲ್ಲ , ನನ್ನ ಅಜ್ಜ ಶಿವಪ್ಪನವರ ಹೆಸರಿನಲ್ಲಿಯೆ ಇವೆ.

4. ದಾವಾ ಎ ಶೇಡ್ಯೂಲ ಐಟಂ 3(1, 4 ರಿಂದ 6) ರ ಆಸ್ತಿಯನ್ನು ನೀವು ಏನಾದರೂ ದೊಡ್ಡಭರಮಪ್ಪನವರಿಗೆ ಅದಲಿ-ಬದಲಿ ಮಾಡಿಕೊಂಡಿದ್ದಿರಾ ಎಂದರೆ ನಾನು ಮಾಡಿಕೊಂಡಿಲ್ಲ ಆದರೆ ದೊಡ್ಡಭರಮಪ್ಪ ಮತ್ತು ಸಣ್ಣಭರಮಪ್ಪನ ಕೆಲವು ಜಮೀನುಗಳನ್ನು ಅವರ ನಡುವೆ ಅದಲಿ-ಬದಲಿ ಮಾಡಿಕೊಂಡಿದ್ದಾರೆ.

5. ಅಸಲು ದಾವೆ 288/11 ಮತ್ತು ಮೇಲ್ಮನವಿ ಸಂಖ್ಯೆ 68/08 ರಲ್ಲಿ ಈ ಕೇಸಿನ ವಾದಿಗಳು ಪಕ್ಷಗಾರರಲ್ಲ ಎಂದರೆ ಸರಿ. ದಾವಾ ಎ ಶೇಡ್ಯೂಲ ಐಟಂ 2(1), ಆಸ್ತಿಯನ್ನು ನಮ್ಮ ತಂದೆ ಯಾವಾಗ ಖರೀದಿಸಿದ್ದರು ಎಂದರೆ 1999ನೇ ಸಾಲೀನಲ್ಲಿ ಇರಬಹುದು. 1999ನೇ ಸಾಲೀನಲ್ಲಿ ನನ್ನ ತಂದೆ ಶಿಕ್ಷಣ ಇಲಾಖೆಯಲ್ಲಿ ಕೆಲಸ ಮಾಡುತ್ತಿದ್ದರು ಎಂದರೆ ಸರಿ. ನನ್ನ ತಂದೆ ಆಡಳಿತಾತ್ಮಕ ಅನುಮತಿ ಪಡೆದು ಖರೀದಿಸಿದ್ದಾರೆ. ಈ ಬಗ್ಗೆ ದಾಖಲೆ ಹಾಜರುಪಡಿಸಿಲ್ಲ. ದಾವಾ ಎ ಶೇಡ್ಯೂಲ ಐಟಂ 2(2) ಆಸ್ತಿಯನ್ನು ನನ್ನ ದೊಡ್ಡಪ್ಪ ನಾಗಪ್ಪ ಖರೀದಿಸಿರುತ್ತಾರೆ. ಸದರಿ ಆಸ್ತಿಯಲ್ಲಿ ಅವರು ಮನೆ ಕಟ್ಟಿಸಿದ್ದಾರೆ. ನಮ್ಮ ಆಸ್ತಿಯಲ್ಲಿ ನಾವು ಮನೆ ಕಟ್ಟಿಸಿದ್ದೇವೆ. ದಾವಾ ಎ ಶೇಡ್ಯೂಲ ಐಟಂ 2ರ ಆಸ್ತಿಗಳನ್ನು ನನ್ನ ಅಜ್ಜ ಶಿವಪ್ಪ ಮತ್ತು ಅವರ ಸಹೋದರ ಕನ್ನಪ್ಪ ಇವರ ಒಟ್ಟು ಕುಟುಂಬದ ಆದಾಯದಿಂದ ಗಳಿಸಲಾಗಿದೆ ಎಂದರೆ ಸರಿಯಲ್ಲ. ವಾದಿಗಳ ಹಿಸ್ಸೆಯನ್ನು ಕಬಳಿಸಲು ಸದರಿ ಆಸ್ತಿಗಳು ಸ್ವಯಾರ್ಜಿತ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ದಾವಾ ಆಸ್ತಿಗಳು ಶಿವಪ್ಪ ಮತ್ತು ಕನ್ನಪ್ಪ ಒಟ್ಟಾಗಿ , ಒಟ್ಟು ಕುಟುಂಬದ ಪರವಾಗಿ ಗಳಿಸಿದ ಆಸ್ತಿಗಳು ಎಂದರೆ ಸರಿಯಲ್ಲ. ವಾದಿಗಳ ಹಿಸ್ಸೆಯನ್ನು ಕಬಳಿಸಲು ಸುಳ್ಳು ಸಂಗತಿಗಳ ಸಾಕ್ಷಿ ಪ್ರಮಾಣ ಪತ್ರ ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸರಿ ಇದೆ.

2ನೇ ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು,
ರಾಣೇಬೆನ್ನೂರು.